ಭಾರತದ ಜನಪ್ರಿಯ ನಾಯಕಿಯರಲ್ಲೊಬ್ಬರಾಗಿ ರೂಪುಗೊಂಡರೆ ಆಶ್ಚರ್ಯವೇನಿಲ್ಲ.

ಮಾಡೆಲಿಂಗ್ ಮೂಲಕ ದೃಶ್ಯ ಮಾಧ್ಯಮದಲ್ಲಿ ತೊಡಗಿಸಿಕೊಂಡ ಅವರು, 'ಕಿರಿಕ್ ಪಾರ್ಟಿ' ಚಿತ್ರದ ಮೂಲಕ ಜನಪ್ರಿಯರಾದರು. 'ಕಿರಿಕ್ ಪಾರ್ಟಿ'ಯ ಯಶಸ್ಸಿನಲ್ಲಿ ರಶ್ಮಿಕಾರ ಮುದ್ದುಮೊಗ, ಮೋಹಕ ನಗೆಯ ಪಾತ್ರವೂ ದೊಡ್ಡದಿದೆ. ಪುನೀತ್‌ರೊಂದಿಗಿನ 'ಅಂಜನಿಪುತ್ರ', ಗಣೇಶ್‌ಗೆ ಜೋಡಿಯಾಗಿದ್ದ 'ಚಮಕ್' ಚಿತ್ರಗಳೂ ಯಶಸ್ಸು ಗಳಿಸುವುದರೊಂದಿಗೆ ರಶ್ಮಿಕಾ ಬೇಡಿಕೆಯ ನಟಿಯಾದರು.

'ಗೀತ ಗೋವಿಂದಂ' ಹಾಗೂ 'ದೇವದಾಸ್' ಚಿತ್ರಗಳು ರಶ್ಮಿಕಾಗೆ ತೆಲುಗು ಚಿತ್ರರಸಿಕರ ನಡುವೆಯೂ ಜನಪ್ರಿಯತೆ ತಂದುಕೊಟ್ಟಿವೆ. ಪ್ರಸ್ತುತ ತೆಲುಗಿನ ಪ್ರಖ್ಯಾತ ನಾಯಕರ ಚಿತ್ರಗಳಲ್ಲಿ ಅವರು ನಟಿಸುತ್ತಿರುವ ಸುದ್ದಿಯಿದೆ.

ಚಿತ್ರರಂಗದಲ್ಲಿ ಏರುದಾರಿಯಲ್ಲಿ ನಡೆಯುತ್ತಿರುವ ಸಂದರ್ಭದಲ್ಲೇ ರಶ್ಮಿಕಾರ ವೈಯಕ್ತಿಕ ಬದುಕಿನಲ್ಲಿ ಕೆಲವು ಗಮನಾರ್ಹ ಬದಲಾವಣೆಗಳು ಕಾಣಿಸಿಕೊಂಡವು. 'ಕಿರಿಕ್ ಪಾರ್ಟಿ'ಯ ನಾಯಕ ರಕ್ಷಿತ್ ಶೆಟ್ಟಿಯೊಂದಿಗೆ ರಶ್ಮಿಕಾರ ವಿವಾಹ ನಿಶ್ಚಿತಾರ್ಥ ಅದ್ದೂರಿಯಾಗಿ ನಡೆಯಿತು. ಯಾವುದೋ ಕಾರಣದಿಂದಾಗಿ ನಿಶ್ಚಿತಾರ್ಥ ಮುರಿದಿದ್ದೂ ಸುದ್ದಿಯಾಯಿತು. ಈ ಪ್ರಕರಣವನ್ನು ರಶ್ಮಿಕಾ ಅತ್ಯಂತ ಘನತೆಯಿಂದ ನಿಭಾಯಿಸಿದ್ದು ಅವರ ವ್ಯಕ್ತಿತ್ವದ ಗಟ್ಟಿತನಕ್ಕೆ ಉದಾಹರಣೆಯಂತಿತ್ತು.

## ಜಿ. ಮಾನಸ

ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಸಂಶೋಧನಾ ವಿದ್ಯಾರ್ಥಿನಿಯಾಗಿರುವ ಜಿ. ಮಾನಸ, ಸುರತ್ಕಲ್‌ನಲ್ಲಿ ನಡೆದ 'ಇಂಡಿಯನ್ ಕೌನ್ಸಿಲ್ ಆಫ್ ಕೆಮಿಸ್ಟ್ಸ್' ಸಂಸ್ಥೆಯ 37ನೇ ವಾರ್ಷಿಕೋತ್ಸವದಲ್ಲಿ ಯುವ ವಿಜ್ಞಾನಿ ಪ್ರಶಸ್ತಿ ಪಡೆದಿದ್ದಾರೆ. ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಆಸಕ್ತಿ ವ್ಯಕ್ತಪಡಿಸದಿರುವ



ಸಂದರ್ಭದಲ್ಲಿ ಮಾನಸ ಅವರ ಸಾಧನೆ ಯುವ ತಲೆಮಾರಿನ ಗಮನಸೆಳೆಯುವಂತಹದ್ದು.

ಪ್ಲಾಸ್ಟಿಕ್ ಉತ್ಪನ್ನಗಳಲ್ಲಿ ಬಳಸುವ 'ಬಿಸ್ಫೆನಾಲ್–ಎಫ್' ಎನ್ನುವ ಮಾಲಿಕ್ಯೂಲ್‌ನಿಂದ ಮನುಷ್ಯರ ಮೇಲಾಗುವ ದುಷ್ಪರಿಣಾಮಗಳೇನು ಎನ್ನುವುದು ಮಾನಸ ಅವರ ಸಂಶೋಧನೆ. ಸಿದ್ಧ ಆಹಾರಗಳ ಡಬ್ಬಿಗಳು, ತಂಪು ಪಾನೀಯಗಳ ಸೀಸೆಗಳು ಹಾಗೂ ಮೈಕ್ರೋ ಓವನ್‌ನಲ್ಲಿ ಬಳಸುವ ಪ್ಲಾಸ್ಟಿಕ್‌ನಿಂದ ಸೋರಿಕೆಯಾಗುವ ಈ ರಾಸಾಯನಿಕ ಮನುಷ್ಯರ ದೇಹ ಸೇರಿ ಉಂಟು ಮಾಡುವ ಪರಿಣಾಮಗಳ ಬಗ್ಗೆ ಮಾನಸ ಬೆಳಕು ಚೆಲ್ಲಿದ್ದಾರೆ. ಈ ದುಷ್ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸುವ ಉದ್ದೇಶವೂ ಅವರಿಗಿದೆ.

ರಸಾಯನ ವಿಜ್ಞಾನದಲ್ಲಿ ಪ್ರಾಧ್ಯಾಪಕರಾಗಿದ್ದ ತಂದೆ ಸಿ. ಗೋವಿಂದರಾಜು ಅವರು ಮಾನಸಾ ಅವರು ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ತಳೆಯಲು ಮೂಲ ಕಾರಣ. ಮೂಲ ವಿಜ್ಞಾನ ಕ್ಷೇತ್ರದತ್ತ ಹೆಚ್ಚಿನ ವಿದ್ಯಾರ್ಥಿಗಳು ಆಸಕ್ತಿ ವ್ಯಕ್ತಪಡಿಸುತ್ತಿಲ್ಲ ಎನ್ನುವ ಬಗ್ಗೆ ಪ್ರತಿಕ್ರಿಯಿಸುವ ಅವರು, ಉದ್ಯೋಗ ಖಾತರಿ ಇಲ್ಲದಿರುವುದು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯೇ ಈ ಅನಾಸಕ್ತಿಗೆ ಕಾರಣ ಎನ್ನುತ್ತಾರೆ.

ಎಲ್ಲರೂ ಎಂಜಿನಿಯರ್‌ಗಳಾದರೆ ವಿಜ್ಞಾನಿಗಳಾಗುವವರು ಯಾರು ಎನ್ನುವ ಮಾನಸ ಅವರ ಪ್ರಶ್ನೆಯಲ್ಲಿ ನಮ್ಮ ಯುವಜನತೆಯ ಮಾರ್ಗದ ಬಗ್ಗೆ ವಿಮರ್ಶೆಯ ಎಚ್ಚರ ಕಾಣಿಸುತ್ತದೆ.

## ವಿ. ಗೀತಾ

'ಕುಡಿದು ಬಂದು ಅಮ್ಮನ್ನ ಬಡಿಯೋ ಅಪ್ಪನನ್ನು ಜೈಲಿಗೆ ಹಾಕಬೇಕಾದರೆ ಏನು ಓದಬೇಕು' ಎಂದು ತಮ್ಮ ತಾತ ಮುನಿಯಪ್ಪ ಅವರನ್ನು ಬಾಲಕಿ ವಿ.ಗೀತಾ ಕೇಳಿದ್ದರಂತೆ. 'ನೀನು ಕರಿಕೋಟು ಹಾಕಬೇಕು' ಎಂದಿದ್ದರು ತಾತ. ಅದೇ ತಾತ, ಹೋರಾಟದ ಸಂಗಾತಿ ಮುರಳಿಯವರನ್ನು ಗೀತಾ ಮದುವೆಯಾಗಲು ನಿರ್ಧರಿಸಿದಾಗ, 'ಅಂತರ್ಜಾತಿ ಮದುವೆಯಾದರೆ ನಾನು ಸಾಯುತ್ತೇನೆ' ಎಂದಿದ್ದರು.

'ಜಾತಿ ಇಲ್ಲ ಎಂದು ನನ್ನ ಬಾಯಲ್ಲಿ ಭಾಷಣ ಮಾಡಿಸಿದ್ದೀಯಾ. ಈಗ ಮದುವೆ ಆಗಬಾರದು ಎನ್ನುವ ನೀನು ಗಾಂಧಿಟೋಪಿಯನ್ನು ತೆಗೆದುಹಾಕು. ನೀನು ಸಾಯುತ್ತೀಯ ಎಂದು ನಾನು ಮದುವೆಯಾಗುವುದನ್ನು ಬಿಡುವುದಿಲ್ಲ' ಎಂದಿದ್ದರು ಗೀತಾ. ಆದರೆ, ಮದುವೆಯ ದಿನ ಎಲ್ಲರಿಗಿಂತ ಮೊದಲು ಬಂದವರೇ ಮುನಿಯಪ್ಪ!

ಹೋರಾಟ ನಮ್ಮ ಮನೆಗಳಿಂದ ಶುರುವಾಗಬೇಕು ಎಂಬುದಕ್ಕೆ ಗೀತಾ ತಾಜಾ ನಿದರ್ಶನ. ಎಸ್‌ಎಫ್‌ಐ ಅಂಗಳದಿಂದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆಯಾಗುವವರೆಗೆ ಅವರ ಹೋರಾಟದ ದನಿಗೆ ಬೆಚ್ಚಿದ ಅಧಿಕಾರಿ, ರಾಜಕಾರಣಿಗಳಿರುವಂತೆ, ಮೆಚ್ಚಿದ ಸಂಗಾತಿಗಳೂ ಅಸಂಖ್ಯ. ಕೋಲಾರದಲ್ಲಿ ಎಲ್ಲಿಯೇ ಜನಪರ, ಮಹಿಳಾಪರ ಹೋರಾಟ ನಡೆದರೂ ಅಲ್ಲಿ ಗೀತಾ ಇರುತ್ತಾರೆ. ಜೆ.ಎಚ್. ಪಟೇಲ್ ಸರ್ಕಾರವಿದ್ದಾಗ ಅರೆಕಾಲಿಕ ಉಪನ್ಯಾಸಕರ ಪರವಾಗಿ ನಡೆದ ಹೋರಾಟದಲ್ಲಿ ಮಗಳು ಜೈಲು ಸೇರಿದಳು ಎಂದು ತಪ್ಪಾಗಿ ತಿಳಿದ ಅವರ ತಾಯಿ ಮನೆಯಿಂದ ಹೊರಹಾಕಿದ್ದರು.

ಕೋಲಾರ ಪಿ.ಜಿ ಸೆಂಟರ್ ಅನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ಸೇರಿಸಿದ್ದನ್ನು ವಿರೋಧಿಸಿ, ಬಿಸಿಯೂಟ ಯೋಜನೆಯನ್ನು ಕೋಲಾರದಂಥ ಬರಪೀಡಿತ ಜಿಲ್ಲೆಗಳಿಗೂ ವಿಸ್ತರಿಸಬೇಕು ಎಂದು ಆಗ್ರಹಿಸಿ ನಡೆಸಿದ ಹೋರಾಟದ ಮುಂಚೂಣಿಯಲ್ಲಿದ್ದವರು ಗೀತಾ. ಕೋಲಾರದ ಮಹಿಳೆಯೊಬ್ಬರನ್ನು ಕುಟುಂಬದವರೇ ಕೊಲೆ



ಮಾಡಿ, ದರೋಡೆ ಪ್ರಕರಣ ದಾಖಲಿಸಿದ್ದರ ಹಿಂದಿನ ಸಂಚನ್ನು ಬಯಲಿಗೆಳೆದು ತಪ್ಪಿತಸ್ಥರನ್ನು ಜೈಲಿಗೆ ಕಳಿಸುವವರೆಗೂ ನಡೆಸಿದ ಹೋರಾಟವನ್ನು ಹಿರಿಯರು ಈಗಲೂ ನೆನಪಿಸಿಕೊಳ್ಳುತ್ತಾರೆ.

'ಹೋರಾಟವೇ ನನ್ನ ಶಕ್ತಿ' ಎನ್ನುವ ಗೀತಾ ತಮ್ಮ ಮಗ ಅನಿಕೇತನನಿಗೆ ಮೂರು ತಿಂಗಳ ಗರ್ಭಿಣಿಯಾಗಿದ್ದಾಗಲೂ ಉದ್ಯೋಗಖಾತ್ರಿ ಬಾಕಿ ಕೂಲಿಗಾಗಿ ಆಗ್ರಹಿಸಿ ಕಾರ್ಮಿಕರ ಜೊತೆ ಕೋಲಾರ ತಾಲ್ಲೂಕು ಪಂಚಾಯ್ತಿ ಮುಂದೆ ಧರಣಿ ನಡೆಸಿದವರು. ಈಗ ಗೀತಾ ಅವರೊಂದಿಗೆ ಪುಟ್ಟ ಅನಿಕೇತನನೂ ಕೆಂಪುಬಾವುಟ ಹಿಡಿದು ಹೋರಾಟಕ್ಕೆ ಸಾಥ್ ನೀಡುತ್ತಿದ್ದಾನೆ. 'ಕರಿಕೋಟು ಹಾಕದೆಯೂ ಗೀತಾ ಹಲವರಿಗೆ ನ್ಯಾಯ ಕೊಡಿಸಿದ್ದಾರೆ' ಎಂದು ಜಿ.ಎನ್. ನಾಗರಾಜ್ ಅವರು ಮುನಿಯಪ್ಪನವರಿಗೆ ಹೇಳಿದ ಮಾತು ಕಿವಿಪಕ್ಕವೇ ಇದೆ.